ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೆಳ್ತಂಗಡಿ

**ಓ.ಎಸ್. 60/2022**

ಸಾಕ್ಷಿದಾರರ ಹೆಸರು : ಪ್ರದೀಪ್

ತಂದೆಯ ಹೆಸರು : ಚನನ ಗೌಡ

ಪಿ.ಡಬ್ಲ್ಯೂ - 03

ವಯಸ್ಸು : 30 ವರ್ಷ

ಉದ್ಯೋಗ : ಖಾಸಗಿ ಕೆಲಸ

ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕ 23.09.2025.

ವಾಸ ಸ್ಥಳ : ನಾವೂರು ಗ್ರಾಮ

ಮುಖ್ಯ ವಿಚಾರಣೆ ಃ- ಶ್ರೀ. ಎ.ಎಸ್.ಕೆ. ವಕೀಲರಿಂದ

ನನಗೆ ವಾದಿಯವರ ಪರಿಚಯ ಇದೆ. ಅವರು ಬಂಗಾಡಿಯ ಸಿ.ಎ. ಬ್ಯಾಂಕಿನ ಅಧ್ಯಕ್ಷರಾಗಿದ್ದಾರೆ ಹಾಗೂ ನಾವೂರು ಗ್ರಾಮ ಪಂಚಾಯಿತಿಯ ಸದಸ್ಯರು. ಅವರು ಬಿ.ಜೆ.ಪಿ. ಪಕ್ಷದಲ್ಲಿ ಕೆಲಸ ಮಾಡಿಕೊಂಡು ಸಾಮಾಜಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. ಹಾಗಾಗಿ ಊರಿನಲ್ಲಿ ಅವರ ಮೇಲೆ ಉತ್ತಮವಾದ ಅಭಿಪ್ರಾಯ ಇದೆ.

2. ಪ್ರತಿವಾದಿಯವರು ನನಗೆ ಪರಿಚಯ. ಅವರು ಮುಂಚೆ ಬಂಗಾಡಿಯ ಸಿ.ಎ. ಬ್ಯಾಂಕಿನ ಅಧ್ಯಕ್ಷರು ಆಗಿದ್ದರು. ಅವರು ಕ್ರಾಂಗೇಸ್ ಪಕ್ಷದಲ್ಲಿ ಕೆಲಸ ಮಾಡುತ್ತಾರೆ. ವಾದಿ ಮತ್ತು ಪ್ರತಿವಾದಿಯವರು ರಾಜಕೀಯವಾಗಿ ಭಿನ್ನಾಭಿಪ್ರಾಯ ಹೊಂದಿದ್ದು, 2022 ರಲ್ಲಿ ಪ್ರತಿವಾದಿಯವರು ವಾದಿಯವರ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿ ಸಾಮಾಜಿಕ ಜಾಲತಾಣವಾದ ವಾಟ್ಸಪ್ ಗ್ರೂಪ್‌ನಲ್ಲಿ ಹಾಕಿದ್ದರು. ಸಾಕ್ಷಿಯು ನಿಪಿ 3 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಮುಂದುವರೆದು ಅದರಲ್ಲಿರುವ ವಿಚಾರಗಳನ್ನೇ ಪ್ರತಿವಾದಿಯವರು ಹಾಕಿದ್ದು ಹಾಗೂ ನಿಪಿ 3 ರಲ್ಲಿ ಪ್ರತಿವಾದಿಯವರ ಮೊಬೈಲ್ ನಂಬರ ಇದೆ ಎಂದು ಹೇಳುತ್ತಾರೆ. ಆ ರೀತಿ ಪ್ರಸಾರ ಮಾಡಿದ್ದರಿಂದ ವಾದಿಯವರ ಗೌರವಕ್ಕೆ ದಕ್ಕೆ ಉಂಟಾಗಿರುತ್ತದೆ. ಸದರಿ ಮೇಸೆಜ್ ಅನ್ನು ನೋಡಿ ನಮಗೂ ಸಹಃ ವಾದಿಯವರ ಮೇಲೆ ತಪ್ಪು ಭಾವನೆ ಬಂದಿರುತ್ತದೆ. ಆದರೆ ಮೂರು ತಿಂಗಳ ನಂತರ ವಾದಿಯವರ ಮೇಲೆ ಮಾಡಿರುವ ಹಾಗೂ ನಿಪಿ 3 ರಲ್ಲಿ ಕಂಡು ಬರುವ ಆರೋಪ ಸುಳ್ಳು ಎಂದು ನನಗೆ ತಿಳಿಯಿತು.

ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ  ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ